ನಿರ್ವಹಿಸಿಕೊಂಡಿದ್ದರೆ ಸಿಗುವ ಸೂಕ್ಷ್ಮ ಸೌಲಭ್ಯಗಳ ಅನುಭವವಿದ್ದರೆ ಖಂಡಿತಾ ನೀವು ಅಂಥ ಮಾತನ್ನು ಆಡುವುದಿಲ್ಲ.

ಅವರಿವರು ಅಂತಲ್ಲ. ಒಂದು ವಯಸ್ಸು ದಾಟಿದ ಮೇಲೂ ತೆಳ್ಳಗೇ ಇರುವ ಹೆಂಗಸರನ್ನು ಈ ಲೋಕ ಒಂದು ಬಗೆಯ ಕುತೂಹಲದಿಂದಲೂ, ಸೆಳೆತದಿಂದಲೂ ಕಾಣುತ್ತದೆ. ರಸ್ತೆಯಲ್ಲಿ ನಡೆವ ಅಪರಿಚಿತರೂ ಮೆಚ್ಚುಗೆಯಿಂದ ಕಣ್ಣರಳಿಸುತ್ತಾರೆ, ಅದ್ಯಾರೋ ಲಿಫ್ಟಿನ ಬಾಗಿಲನ್ನು ತಡೆದು ನಿಲ್ಲಿಸಿ, 'ಯಾವ ಫ್ಲೋರು?' ಅಂತ ಮೃದುವಾಗಿ ಉಲಿಯುತ್ತಾರೆ, ಎಂಥದೇ ದೊಡ್ಡ ಪ್ರಮಾದ ಮಾಡಿಟ್ಟರೂ ಒಂದೇ ಒಂದು ಅಡ್ಡ ಮಾತಾಡಲು ಬಾಸ್ ಒದ್ದಾಡಿ ಹೋಗುತ್ತಾನೆ. ಅಷ್ಟೇ ಏಕೆ? ನಡು ಸಣ್ಣಕಿರುವಾಗ ಮನೆಯಲ್ಲಿ ಗಂಡನೂ ಜಾಸ್ತಿ ವಾದ ಬೆಳೆಸೋಕೆ ಹೋಗೋದಿಲ್ಲ ಅಂದರೆ ನಿಮಗೆ ವಿಶ್ವಾಸ ಮೂಡುತ್ತದೆಯೇ?

* * *

ಸಮಯ ನೋಡಿದೆ. ರಾತ್ರಿಯ ನಾಲ್ಕನೇ ಪ್ರಹರವೂ ಸರಿಯುತ್ತಿದೆ. ಮತ್ತಿಲ್ಲಿ ಕುಳಿತಿದೆ ನಿಗಿನಿಗಿ ಕೆಂಡದಂತೆ ಸುಡುಸುಡುತ್ತಿರೋ ಒಂದು ಚಾಕ್ಲೆಟ್ ಕೇಕ್. ಎಷ್ಟು ಕ್ಯಾಲರಿಗಳಿರಬಹುದು? ಈ ಕೋಣೆಯನ್ನಷ್ಟೇ ಅಲ್ಲ, ಇಡೀ ಮನೆಯನ್ನೇ ಆವರಿಸಿರುವ ಪರಿಮಳ ನೋಡಿದರೆ ಚೆನ್ನಾಗಿ ಬೆಣ್ಣೆ ಹಾಕಿ ತಯಾರಿಸಿದ್ದಿರಬಹುದು. ಸುಮಾರು ಮೂರೂವರೆ ಸಾವಿರ ಕ್ಯಾಲರಿ ಅಂದುಕೊಳ್ಳೋಣ. ವಾರಕ್ಕೆ ಒಂದೇ ಪೀಸ್ ತಿಂದರಾಯ್ತು ಅಂತ ಪ್ರತಿಜ್ಞೆ ಮಾಡಿಕೊಂಡು ಉಳಿದ ಕೇಕನ್ನು ಫ್ರೀಜ್ ಮಾಡಿಟ್ಟರೆ? ಆಗ ಕ್ಯಾಲರಿ ಹಂಚಿಹೋಗಿ ವ್ವೇಯಿಂಗ್ ಸ್ಕೇಲಿನ ಮೇಲೆ ದಾಖಲಾಗದಿರಬಹುದು. ಇಲ್ಲಿಲ್ಲ, ಹೇಳೋಕೇ ಬರೋದಿಲ್ಲ. ಐದು ಸಾವಿರ ಕ್ಯಾಲರಿ ಇದ್ದರೂ ಇದ್ದೀತು. ಅದೇಕೋ ಚಿಕ್ಕಮ್ಮ ಕೇಕ್ ಬ್ಯಾಟರ್ ತಯಾರಿಸುವಾಗ ಇನ್ನೆರಡು ಬಟರ್ ಸ್ಟಿಕ್ಕುಗಳನ್ನು ದವಡೆಗಚ್ಚಿ ಸೇರಿಸಿದ ಆಲಿಸನ್‌ಳ ಚಿತ್ರ ನನ್ನ ಕಣ್ಣ ಮುಂದೆ ಸುಳಿದು ಹೋಯಿತು.

ಒಂದು ಪಕ್ಷದಲ್ಲಿ ಮೊದಲ ಪೀಸ್ ತಿಂದ ನಂತರ ಇನ್ನೊಂದು ಬೇಕು ಅನ್ನಿಸಿಬಿಟ್ಟರೆ? ಆ ನಂತರ ಇನ್ನೊಂದು. ಆಮೇಲೆ ಒಂದೇ ಒಂದು ಅಂತ ಮತ್ತೊಂದು. ನಂತರ ಇಷ್ಟೆಲ್ಲ ಆದ ಮೇಲೆ ಇನ್ನೊಂದೇನು ಹೆಚ್ಚೇ ಅಂತ ಮೊಗದೊಂದು... ಹಾಗೇ

